ಎಸ್.ಸಿ.15/2023
ಪ್ರಾ.ಸಾ **:15** ಪ್ರಾ.ಸಾ **:2**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ರೇಣುಕಾ |
| ಗಂಡ ಹೆಸರು | : | ನಿರುಪಾದಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಗಾಂಧಿನಗರ |

ಸಾಕ್ಷಿಗೆ ದಿನಾಂಕ **22-01-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**</u>

ನನ್ನ ಮನೆ ಗಾಂಧಿನಗರದಲ್ಲಿದೆ. ಆ ಮನೆಯಲ್ಲಿ ನೆಲ ಅಂತಸ್ತು ಮತ್ತು ಮೊದಲನೇ ಮಹಡಿ ಇದೆ. ನಾನು ಮತ್ತು ನನ್ನ ಕುಟುಂಬ ಮೊದಲನೇ ಮಹಡಿಯಲ್ಲಿ ವಾಸವಿದ್ದೇವು. ನನ್ನ ಮನೆಯ ನೆಲ ಮಹಡಿಯಲ್ಲಿ ಈ ಕೇಸಿನಲ್ಲಿ ಮರಣ ಹೊಂದಿದ ಆರತಿ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿ ಬಾಡಿಗೆಯಿಂದ ಸುಮಾರು 10 ತಿಂಗಳ ವಾಸವಿದ್ದರು. ಅವರಿಗೆ ಮಕ್ಕಳು ಇರಲಿಲ್ಲ.

2. ಆರೋಪಿ ಮತ್ತು ಆತನ ಹೆಂಡತಿ ಒಬ್ಬರಿಗೊಬ್ಬರು ಚೆನ್ನಾಗಿದ್ದರು. ಆರತಿ ನನಗೆ ಆರೋಪಿ ಏನು ಮಾಡಿದ್ದಾನೆ ಎಂಬ ಕುರಿತು ಏನೂ ಹೇಳಿರುವುದಿಲ್ಲ. ಆರತಿ ಇವಳು ಯಾವ ಕಾರಣಕ್ಕಾಗಿ ಮರಣ ಹೊಂದಿದ್ದಾಳೆ ಎಂಬುದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**</u>

3. ಆರೋಪಿ ತನ್ನ ಹೆಂಡತಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಡುತ್ತಿದ್ದನು ಅಂದರೆ ಸರಿಯಲ್ಲ. ಆ ವಿಷಯವನ್ನು ನನಗೆ ಆರತಿ ತಿಳಿಸಿದ್ದಳು ಅಂದರೆ ಸರಿಯಲ್ಲ.

4. ದಿನಾಂಕ 02-09-2022 ರಂದು ಆರತಿ ತನ್ನ ಮನೆಯ ಮುಂದೆ ಸಪ್ಪೆಯಾಗಿ

ಕುಳಿತ್ತಿದ್ದಳು ಮತ್ತು ರಜೆ ಹಾಕಿದ್ದಳು, ಆನಂತರ ಅವಳು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ನಾನು ನೋಡಿದ್ದೇನೆ ಅಂದರೆ ಸರಿಯಲ್ಲ. ಆರತಿ ಇವಳ ಸಾವಿಗೆ ಆರೋಪಿ ಕಾರಣ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ.ಪಿ.6 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

(ಆರೋಪಿ ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದಾನೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು